**ಅಸಲು ದಾವ ಸಂಖ್ಯೆಃ 758/2012**

**ಪಿ.ಡಬ್ಲೂ -1**

**ದಿಃ 01-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ AMP ರವರಿಂದಃ-**

1. ನಿಡಿ-9 ರ ಪಂಚನಾಮೆ ಮಾಡುವ ಕಾಲಕ್ಕೆ ಗ್ರಾಮ ಲೆಕ್ಕಾಧಿಕಾರಿಯವರಿಂದ ನಮಗೆ ಯಾವುದೇ ನೋಟಿಸ ಬಂದಿರಲಿಲ್ಲ. ಪಂಚನಾಮ ಕಾಲಕ್ಕೆ ನಾವು ಹೋಗಿದ್ದೆವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2013 ನೇ ಇಸವಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯು ಪಂಚನಾಮೆ ಮಾಡಿ ದಾವಾ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ್ದು ಎಂದು ಸದರಿ ಸ್ವತ್ತಿನಲ್ಲಿ 1ನೇ ಪ್ರತಿವಾದಿ ಕಬ್ಜೆಯಲ್ಲಿ ಇರುತ್ತಾರೆ ಎಂದು ವರದಿ ನೀಡಿರುತ್ತಾರೆ ಎಂದರೆ ಸಾಕ್ಷಿ ತನಗೆ ಸದರಿ ಪಂಚನಾಮೆಯ ಕುರಿತು ತಿಳಿದಿಲ್ಲ ಎಂದು ನುಡಿಯುತ್ತಾರೆ. ತಹಶೀಲ್ದಾರ ರವರು ಸದರಿ ಆಸ್ತಿಯ ಕಬ್ಜೆಯು ಪ್ರತಿವಾದಿಯ ಬಳಿ ಇರುತ್ತದೆ ಎಂದು ವರದಿ ನೀಡಿದ್ದು, ಸದರಿ ಪ್ರಮಾಣ ಪತ್ರವನ್ನು ಪ್ರತಿವಾದಿಯರು ಈ ದಾವೆಯಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡುವ ಮೊದಲು ನನಗೆ ನೋಟಿಸ ಬಂದಿತ್ತು, ನನಗೆ ಅದರ ಕುರಿತು ತಿಳಿದಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. 1ನೇ ಪ್ರತಿವಾದಿ ಮಾರುತಿ ಮರಗನಾಚೆ ರವರ ತಂದೆ ಬಾಳು ಮರಗನಾಚೆ ನನಗೆ ಪರಿಚಯ ಇರುವುದಿಲ್ಲ. ನಾನು ದಾವಾ ಸ್ವತ್ತಿನ ಕಡೆಗೆ ಪ್ರತಿದಿನ ಹೋಗುತ್ತೇನೆ. ದಾವಾ ಸ್ವತ್ತಾದ ಸರ್ವೆ ನಂಬರ 718/2 ಹಾಗೂ 718/5 ರಲ್ಲಿ ಬಾಳು ಮರಗನಾಚೆ ರವರು ಮರಣಹೊಂದಿದ ನಂತರ ಸಮಾಧಿ ಕಟ್ಟಲಾಗಿದೆ ಎಂದರೆ ಸಾಕ್ಷಿ ಮೊದಲಿನಿಂದಲೂ ಅಲ್ಲಿ ಸಮಾಧಿ ಇರುತ್ತದೆ ಆದರೆ ಯಾರದ್ದು ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬಾಳು ಮರಗನಾಚೆ ಹಾಗೂ ಅವರ

ಪತ್ನಿ ಯಲ್ಲುಬಾಯಿ ಇಬ್ಬರದ್ದೂ ಸಮಾಧಿ ಸದರಿ ಜಮೀನಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಮೊದಲಿನಿಂದಲೂ ಸಮಾಧಿ ಇರುತ್ತದೆ, ಆದರೆ ಯಾರದ್ದು ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಇರುವ ಸಮಾಧಿ ನಾವು ಕಟ್ಟಿಸಿರುವುದಿಲ್ಲ ಎಂದರೆ ಸರಿ. ಸದರಿ ಸಮಾಧಿಯನ್ನು ಪ್ರತಿವಾದಿಯರು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ನಿಡಿ-1 ಕರಾರು ಪತ್ರದ ಅಡಿಯಲ್ಲಿ ನನ್ನ ತಂದೆ ದೇವಪ್ಪ ಪಾಟೀಲ ರವರಿಗೆ 1ನೇ ಪ್ರತಿವಾದಿಯ ತಂದೆಯಾದ ಬಾಳು ಮರಗನಾಚೆ ರವರು 12,100/- ರೂ.ಗಳನ್ನು ಕ್ರಯದ ಮುಂಗಡ ಹಣವಾಗಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದು ಕ್ರಯದ ಮುಂಗಡ ಹಣ ಆಗಿರುವುದಿಲ್ಲ, ಬದಲಾಗಿ ಅಡಮಾನ ವ್ಯವಹಾರ ಆಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ನಮಗೆ ಉಳಿದ ಕ್ರಯದ ಪ್ರತಿಫಲವಾದ 500/- ರೂ.ಗಳನ್ನು ಕೊಡಲು ತಯಾರು ಇರುತ್ತಾರೆ ಎಂದರೆ ಸಾಕ್ಷಿ ನಿಡಿ-1ರ ಪತ್ರ ತಯಾರು ಮಾಡಿದ ಖೊಟ್ಟಿ ಪತ್ರ ಎಂದು ನುಡಿಯುತ್ತಾರೆ. ನಿಡಿ-1 ರ ದಾಖಲೆ ಖೊಟ್ಟಿ ದಾಖಲೆ ಆದ ಕಾರಣ ನಾವು ದಾವಾ ಸ್ವತ್ತನ್ನು ಪ್ರತಿವಾದಿಯರಿಗೆ ಮಾರಾಟ ಮಾಡಲು ತಯಾರ ಇರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**